ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್‌ಎಪ್‌ಸಿ ನ್ಯಾಯಾಲಯ, ಹುಬ್ಬಳ್ಳಿ
ಸಿ ಸಿ ನಂ.226/2012

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | ಃ | ಪರಶುರಾಮ ಹಣ್ಣಿಕೇರಿ | ಪಿಡಬ್ಲೂ | ಃ | 25 |
| ತಂದೆಯ ಹೆಸರು | ಃ | ನೀಲಪ್ಪ | ಸಿಡಬ್ಲೂ | ಃ | 23 |
| ವಯಸ್ಸು | ಃ | 66 ವರ್ಷ | | | |
| ಉದ್ಯೋಗ | ಃ | ನಿವೃತ್ತ ಮ್ಯಾನೇಜರ್ | | | |
| ವಾಸ ಸ್ಥಳ | ಃ | ಧಾರವಾಡ | | | |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ 14/11/2019
ಮುಖ್ಯ ವಿಚಾರಣೆ ಎಪಿಪಿ ಯವರಿಂದ ಃ

ನಾನು ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡಿ ದಿ.31.03.2014 ರಂದು ನಿವೃತ್ತಿಯಾಗಿರುತ್ತೇನೆ. ಈ ಹಿಂದೆ ಅಂದರೆ 3-4 ವರ್ಷಗಳ ಹಿಂದೆ ಧಾರವಾಡ ಕೋರ್ಟಿನಲ್ಲಿ ಪೊಲೀಸರು ನನ್ನನ್ನು ಕರೆಯಿಸಿದ್ದರು. 8 ನೇ ಆರೋಪಿ ಹೆಸರಿಗೆ 1999-2000 ರ ಮದ್ಯ ಒಟ್ಟು ನಾಲ್ಕು ಚೆಕ್ಕುಗಳು ಪಾಸು ಆಗಿವೆ. ಸದರಿ ಚೆಕ್ಕುಗಳನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಸದರಿ ಚೆಕ್ಕಿನ ಮೂಲ ದಾಖಲಾತಿಗಳು ಕಡತದಲ್ಲಿ ಇಲ್ಲದೇ ಇರುವುದರಿಂದ, ಮೂಲ ಚೆಕ್ಕುಗಳು ಬಂದ ಮೇಲೆ ಮುಖ್ಯ ವಿಚಾರಣೆಯನ್ನು ಮುಂದುವರೆಸಬೇಕು ಮಾನ್ಯ ಸಅಅ ರವರು ಪ್ರಾರ್ಥಿಸಿಕೊಂಡರು, ಆದರೆ ಹಲವಾರು ಬಾರಿ ನಿರ್ದೇಶನ ನೀಡಿದ್ದರೂ ಕೂಡಾ ಸಂಬಂಧಪಟ್ಟ ತನಿಖಾಧಿಕಾರಿಯು ಮೂಲ ಚೆಕ್ಕುಗಳನ್ನು ಹಾಜರು ಮಾಡಿಲ. ಆದ್ದರಿಂದ ಈ ಕೇಸನ್ನು ಮತ್ತೇ ಮುಂದೂಡುವಲ್ಲಿ ಅರ್ಥ ಇರುವುದಿಲ್ಲ ಆದ್ದರಿಂದ ಮಾನ್ಯ ಸಸಅ ರವರ ಪ್ರಾರ್ಥನೆಯನ್ನು ತಳ್ಳಿ ಹಾಕಲಾಯಿತು.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎಲ್.ಎಮ್.ಎಸ್ ವಕೀಲರಿಂದಃ**

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಆರ್.ಬಿ.ಹೆಚ್ ವಕೀಲರಿಂದಃ**

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಎಮ್ ವ್ಹಿ ಎಸ್ ವಕೀಲರಿಂದಃ</u>**

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ 2 ಮತ್ತು 7 ನೇ ಆರೋಪಿ ಪರ ವಕೀಲರಿಂದಃ</u>**

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ 8 ನೇ ಆರೋಪಿ ಪರ ವಕೀಲರಿಂದಃ</u>**

ಈ ಹಂತದಲ್ಲಿ 8 ನೇ ಆರೋಪಿ ಹಾಜರಿದ್ದು ಅವರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ : ಇಲ್ಲ**

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಫ್ , ಹುಬ್ಬಳ್ಳಿ.